ಪು.ಸ.ಕುಂ:(ಬಿ)ಸಿಆರ್ 37:06-07. ದಿನಾಂಕ:16-10-2006.

## ಕುಂದಾಪುರ ಪುರಸಭೆ

## ಮರು ಟೆಂಡರು ಕಮ್ ಏಲಂನ 4ನೇ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಕುಂದಾಪುರ ಪುರಸಭೆಗೆ ಸೇರಿದ ಸರ್ವೆ ನಂಬ್ರ: 117 ರಲ್ಲಿ ಕುಡ್ಸೆಂಪ್ ವತಿಯಿಂದ ನಿರ್ಮಾಣಗೊಂಡಿರುವ ಈ ಕೆಳಗೆ ಕಾಣಿಸಿದ ವಾಣಿಜ್ಯ ಸಂಕೀರ್ಣದಲ್ಲಿಯ ಅಂಗಡಿ ಕೋಣೆಗಳನ್ನು (ಮಳಿಗೆ) ವಹಿಸಿಕೊಡಲಾಗುವ ದಿನಾಂಕದಿಂದ 20 ವರ್ಷಗಳ ಅವಧಿಗೆ ಮಾಸಿಕ ಲೈಸನ್ಸ್ ಫೀ (ಬಾಡಿಗೆ) ಆಧಾರದ ಮೇಲೆ ಉಪಯೋಗಿಸಿಕೊಂಡು ಹೋಗುವರೇ, ಕೆಳಕಾಣಿಸಿದಂತೆ ಬಾಡಿಗೆಯನ್ನು ಹಾಗೂ ಮರು ಪಾವತಿಯಿಲ್ಲದ ಪ್ರೀಮಿಯಂನ ಕನಿಷ್ಠ ಮೊತ್ತವನ್ನು ನಿಗದಿ ಪಡಿಸಿದ್ದು, ಸದ್ರಿ ಬಾಡಿಗೆಯನ್ನು ಮೂರು ವರ್ಷಗಳಿಗೊಮ್ಮೆ ಶೇಕಡಾ 10 ರಂತೆ ಹೆಚ್ಚಿಸುವ ಷರತ್ತಿಗೆ ಒಳಪಟ್ಟು ಹಾಗೂ ಮರು ಪಾವತಿಯಿಲ್ಲದ ಪ್ರೀಮಿಯಂ ಮೊತ್ತಕ್ಕೆ ಬಿಡ್ ಮೂಲಕ ಪಡೆಯಲು ಏಲಂ ಷರತ್ತುಗಳಿಗನುಸಾರವಾಗಿ ದಿನಾಂಕ:26-10-2006 ರಂದು ಗುರುವಾರ ಬೆಳಿಗ್ಗೆ 12.00 ಗಂಟೆಗೆ ಸರಿಯಾಗಿ ಪುರಸಭಾ ಕಛೇರಿಯಲ್ಲಿ ಅಧ್ಯಕ್ಷರು ಮತ್ತು ಮುಖ್ಯಾಧಿಕಾರಿಗಳು ಅಥವಾ ಇವರಿಂದ ಅಧಿಕಾರ ಪಡೆದವರ ಮುಖಾಂತರ ಬಹಿರಂಗ ಟೆಂಡರ್ ಕಮ್ ಏಲಂ ಮೂಲಕ ವಿಲೇ ಮಾಡಲಾಗುವುದು.

ಆಸಕ್ತರು ಏಲಂ ದಿನ ಬೆಳಿಗ್ಗೆ 11.30 ಗಂಟೆಯವರೆಗೆ ಏಲಂ ಠೇವಣಿಯನ್ನು ಮುಖ್ಯಾಧಿಕಾರಿ, ಪುರಸಭೆ, ಕುಂದಾಪುರ ಇವರ ಹೆಸರಿಗೆ ಡಿ.ಡಿ.ಮೂಲಕ ಅಥವಾ ನಗದಾಗಿ ಪಾವತಿಸಿ ಮರು ಪಾವತಿಯಿಲ್ಲದ ಪ್ರೀಮಿಯಂ ಮೊತ್ತಕ್ಕೆ ಬಿಡ್ ಮೂಲಕ ಕೋಣೆಗಳನ್ನು ಪಡೆದುಕೊಳ್ಳಬಹುದು. ಹೆಚ್ಚಿನ ಮಾಹಿತಿಯನ್ನು ಪುರಸಭಾ ಕಾರ್ಯಾಲಯದಲ್ಲಿ ಕಛೇರಿ ಅವಧಿಯಲ್ಲಿ ಪರಿಶೀಲಿಸಬಹುದು.

I ಕುಡ್ಸೆಂಪ್ ವತಿಯಿಂದ ನಿರ್ಮಾಣಗೊಂಡ ಪುರಸಭಾ ಕಛೇರಿ ಹಾಗೂ ವಾಣಿಜ್ಯ ಸಂಕೀರ್ಣದಲ್ಲಿಯ ನೆಲ ಅಂತಸ್ತಿನಲ್ಲಿರುವ ಕೋಣೆಗಳು:

| ಕ್ರ.ಸಂ. | ಕೋಣೆ ನಂಬ್ರ | ವಿಸ್ತೀರ್ಣ ಚದರ ಅಡಿಗಳಲ್ಲಿ | ನಿಗದಿಪಡಿಸಿದ ಮಾಸಿಕ ಲೈಸನ್ಸ್ ಫೀ (ಬಾಡಿಗೆ) ರೂ. | ಮರು ಪಾವತಿಯಿಲ್ಲದ ಪ್ರೀಮಿಯಂನ ಕನಿಷ್ಠ ಮೊತ್ತ (ಪುರಸಭೆಯ ಪಾಲು) ರೂ. ಲಕ್ಷಗಳಲ್ಲಿ | ಏಲಂ ಠೇವಣಿ | ಏಲಂ ಮುಗಿದ ಕೂಡಲೇ ಪಾವತಿಸಬೇಕಾದ ಮೊತ್ತ | ಮೀಸಲಾತಿ ವಿವರ |
|---|---|---|---|---|---|---|---|
| (1) | (2) | (3) | (4) | (5) | (6) | (7) | (8) |
| 1) | ಜಿ1 | 333-00 | 3330-00 | 2.00 | 10000-00 | 6 ತಿಂಗಳ ಮುಂಗಡ ಮಾಸಿಕ ಲೈಸನ್ಸ್ ಫೀ (ಬಾಡಿಗೆ) | |
| 2) | ಜಿ4ಎ | 289-00 | 5780-00 | 2.00 | 10000-00 | | ಸಾಮಾನ್ಯಮಹಿಳೆ |
| 3) | ಜಿ5 | 230-00 | 3450-00 | 1.50 | 10000-00 | | |
| 4) | ಜಿ6 | 230-00 | 3450-00 | 1.50 | 10000-00 | | ಸಾಮಾನ್ಯಮಹಿಳೆ |
| 5) | ಜಿ7 | 333-00 | 3330-00 | 2.00 | 10000-00 | | |
| 6) | ಜಿ8ಎ | 309-00 | 6200-00 | 2.00 | 10000-00 | | ಸಾಮಾನ್ಯಮಹಿಳೆ |
| 7) | ಜಿ8ಬಿ | 310-00 | 6200-00 | 2.00 | 10000-00 | | |
| 8) | ಜಿ9ಎ | 310-00 | 6200-00 | 2.00 | 10000-00 | | |
| 9) | ಜಿ9ಸಿ | 205-00 | 3075-00 | 2.00 | 10000-00 | | |
| 10) | ಜಿ10 | 230-00 | 3450-00 | 2.00 | 10000-00 | | ಸಾಮಾನ್ಯಮಹಿಳೆ |
| 11) | ಜಿ11 | 226-00 | 3390-00 | 2.00 | 10000-00 | | |
| 12) | ಜಿ12 | 290-00 | 2900-00 | 1.50 | 10000-00 | | |
| 13) | ಜಿ13 | 311-00 | 3110-00 | 1.50 | 10000-00 | | ಪರಿಶಿಷ್ಟ ಜಾತಿ |
| 14) | ಜಿ14 | 311-00 | 3110-00 | 1.50 | 10000-00 | | |

ಕುಡ್ಸೆಂಪ್ ವತಿಯಿಂದ ನಿರ್ಮಾಣಗೊಂಡ ಪುರಸಭಾ ಕಚೇರಿ ಹಾಗೂ ಮೊದಲನೇ ಮಹಡಿಯಲ್ಲಿರುವ ಕೊಠಡಿಗಳು:

| (1) | (2) | (3) | (4) | (5) | (6) | (7) | (8) |
|---|---|---|---|---|---|---|---|
| 1) | ಎಫ್1 | 333-00 | 2330-00 | 50000-00 | 10000-00 | 6 ತಿಂಗಳ ಮುಂಗಡ ಮಾಸಿಕ ಲೈಸನ್ಸ್ ಫೀ (ಬಾಡಿಗೆ) | ಪರಿಶಿಷ್ಟ ಜಾತಿ ಮಹಿಳೆ |
| 2) | ಎಫ್4 | 383-00 | 2680-00 | 50000-00 | 10000-00 | | |
| 3) | ಎಫ್5 | 279-00 | 1955-00 | 50000-00 | 10000-00 | | ಪರಿಶಿಷ್ಟ ಪಂಗಡ |
| 4) | ಎಫ್6 | 309-00 | 2165-00 | 50000-00 | 10000-00 | | ಸಾಮಾನ್ಯ ಮಹಿಳೆ |
| 5) | ಎಫ್7ಎ | 293-00 | 2050-00 | 50000-00 | 10000-00 | | ಸಾಮಾನ್ಯ ಮಹಿಳೆ |
| 6) | ಎಫ್7ಬಿ | 293-00 | 2050-00 | 50000-00 | 10000-00 | | ಪರಿಶಿಷ್ಟ ಜಾತಿ |
| 7) | ಎಫ್8 | 309-00 | 2165-00 | 50000-00 | 10000-00 | | |
| 8) | ಎಫ್9 | 279-00 | 1955-00 | 50000-00 | 10000-00 | | |
| 9) | ಎಫ್10 | 383-00 | 2680-00 | 50000-00 | 10000-00 | | |
| 10) | ಎಫ್11 | 383-00 | 2680-00 | 50000-00 | 10000-00 | | |
| 11) | ಎಫ್12 | 301-00 | 2110-00 | 50000-00 | 10000-00 | | |
| 12) | ಎಫ್13 | 333-00 | 2330-00 | 50000-00 | 10000-00 | | |
| 13) | ಎಫ್14 | 361-00 | 2530-00 | 50000-00 | 10000-00 | | ಸಾಮಾನ್ಯ ಮಹಿಳೆ |
| 14) | ಎಫ್15 | 383-00 | 2680-00 | 50000-00 | 10000-00 | | ಸಾಮಾನ್ಯ ಮಹಿಳೆ |
| 15) | ಎಫ್16 | 279-00 | 1955-00 | 50000-00 | 10000-00 | | ಸಾಮಾನ್ಯ ಮಹಿಳೆ |
| 16) | ಎಫ್17 | 311-00 | 2180-00 | 50000-00 | 10000-00 | | ಸಾಮಾನ್ಯ ಮಹಿಳೆ |
| 17) | ಎಫ್18ಎ | 293-00 | 2050-00 | 50000-00 | 10000-00 | | |
| 18) | ಎಫ್18ಬಿ | 293-00 | 2050-00 | 50000-00 | 10000-00 | | |
| 19) | ಎಫ್19 | 311-00 | 2180-00 | 50000-00 | 10000-00 | | ಪರಿಶಿಷ್ಟ ಜಾತಿ ಮಹಿಳೆ |
| 20) | ಎಫ್20 | 279-00 | 1955-00 | 50000-00 | 10000-00 | | ಪರಿಶಿಷ್ಟ ಜಾತಿ |
| 21) | ಎಫ್21 | 383-00 | 2680-00 | 50000-00 | 10000-00 | | |
| 22) | ಎಫ್22 | 383-00 | 2680-00 | 50000-00 | 10000-00 | | |
| 23) | ಎಫ್23 | 301-00 | 2110-00 | 50000-00 | 10000-00 | | |

III ಹೊಸ ಬಸ್ಸು ನಿಲ್ದಾಣದ ಆವರಣದಲ್ಲಿರುವ ಐ.ಡಿ.ಎಸ್.ಎಂ.ಟಿ. ಯೋಜನೆಯಡಿಯ ವಾಣಿಜ್ಯ ಸಂಕೀರ್ಣದ ಪ್ರಥಮ ಮಹಡಿಯಲ್ಲಿರುವ ಕೊಠಡಿಗಳು:

| | | | | | | |
|---|---|---|---|---|---|---|
| 1) | 18 | 282-50 | 1500-00 | 50000-00 | 5000-00 | 6 ತಿಂಗಳ ಮುಂಗಡ ಮಾಸಿಕ ಲೈಸನ್ಸ್ ಫೀ (ಬಾಡಿಗೆ) |
| 2) | 19 | 262-00 | 1500-00 | 50000-00 | 5000-00 | |
| 3) | 20 | 207-50 | 1500-00 | 50000-00 | 5000-00 | |
| 4) | 21 | 207-50 | 1500-00 | 50000-00 | 5000-00 | |
| 5) | 22 | 207-50 | 1500-00 | 50000-00 | 5000-00 | |
| 6) | 24 | 180-50 | 1500-00 | 50000-00 | 5000-00 | |
| 7) | 28 | 207-50 | 1500-00 | 50000-00 | 5000-00 | |
| 8) | 29 | 263-00 | 1500-00 | 50000-00 | 5000-00 | |
| 9) | 30 | 282-00 | 1500-00 | 50000-00 | 5000-00 | |

## : ಷರತ್ತುಗಳ (ನಿಬಂಧನೆಗಳು) :

1) ಟೆಂಡರ್ ಕಮ್ ಏಲಂನಲ್ಲಿ ಭಾಗವಹಿಸುವ ಮೊದಲು ಐಟಂಗಳನ್ನು ಪರಿಶೀಲಿಸಿ ಏಲಂನಲ್ಲಿ ಭಾಗವಹಿಸ ತಕ್ಕದ್ದು. ಕೋಣೆಗಳನ್ನು ಈಗಿರುವ ಯಥಾ ಸ್ಥಿತಿಯಲ್ಲಿಯೇ ಏಲಂ ಮಾಡಲಾಗುವುದು. ಟೆಂಡರ್ ಕಮ್ ಏಲಂನಲ್ಲಿ ಪಡೆದ ಕೋಣೆಗೆ ಸಂಬಂಧಿಸಿ ಏಲಂದಾರನು ಯಾವುದೇ ರೀತಿಯ ಬೇಡಿಕೆಯನ್ನು ಪುರಸಭೆಗೆ ಸಲ್ಲಿಸುವಂತಿಲ್ಲ.

2) ಟೆಂಡರ್ ಕಮ್ ಏಲಂನಲ್ಲಿ ಭಾಗವಹಿಸುವವರು ಏಲಂಗೆ ಮೊದಲು ತಮ್ಮ ಖಾಯಂ ವಿಳಾಸವನ್ನು ಸ್ಪಷ್ಟವಾಗಿ ನೀಡತಕ್ಕದ್ದು. ಏಲಂ ತಮ್ಮ ಹೆಸರಿಗೆ ಮಂಜೂರಾದೊಡನೆ ಪಾಸ್ ಪೋರ್ಟ್ ಸೈಜಿನ 2 ಭಾವಚಿತ್ರ ಹಾಗೂ ವಾಸ್ತವ್ಯ ಹೊಂದಿರುವ ಸ್ಥಳದ ಬಗ್ಗೆ ಪಡಿತರ ಚೀಟಿಯ ಜೆರಾಕ್ಸ್ ಪ್ರತಿಯನ್ನು ನೀಡತಕ್ಕದ್ದು.

3) ಟೆಂಡರ್ ಕಮ್ ಏಲಂನಲ್ಲಿ ಭಾಗವಹಿಸಲು ಇಚ್ಛಿಸುವ ಪ್ರತಿಯೊಬ್ಬ ಬಿಡ್ಡುದಾರನು ಪ್ರತಿಯೊಂದು ಐಟಂಗೆ ನಿಗಧಿಪಡಿಸಿದ ಏಲಂ ಠೇವಣಿಯನ್ನು ಏಲಂ ದಿನ ಬೆಳಿಗ್ಗೆ 11.30 ಗಂಟೆಯ ಒಳಗೆ ಪುರಸಭೆಗೆ ಪಾವತಿಸತಕ್ಕದ್ದು. ಅನಂತರ ಬಂದ ಠೇವಣಿಯನ್ನು ಸ್ವೀಕರಿಸಲಾಗುವುದಿಲ್ಲ. ಏಲಂ ಠೇವಣಿ ಪಾವತಿಸದೇ ಏಲಂನಲ್ಲಿ ಭಾಗವಹಿಸಲು ಅವಕಾಶ ಇರುವುದಿಲ್ಲ.

4) ಟೆಂಡರ್‌ಕಮ್ ಏಲಂನಲ್ಲಿ ಭಾಗವಹಿಸಲಿಚ್ಛಿಸುವ ಪ್ರತಿಯೊಬ್ಬ ಬಿಡ್ಡುದಾರನು ಪುರಸಭೆಗೆ ಯಾವುದೇ ವಿಧವಾದ ಬಾಕಿದಾರನಾಗಿರಬಾರದು. ಆಗಿದ್ದಲ್ಲಿ ಏಲಂನಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ. ಆಕಸ್ಮಿಕವಾಗಿ ತಿಳಿಯದ ರೀತಿಯಲ್ಲಿ ಠೇವಣಿ ಪಾವತಿಸಿದಲ್ಲಿ ಅಂತಹ ಮೊಬಲಗನ್ನು ಪುರಸಭೆಯ ಬಾಕಿಗಾಗಿ ಮುಟ್ಟುಗೋಲು ಹಾಕಲಾಗುವುದು.

5) ಅಂತಿಮ ಬಿಡ್ಡುದಾರನ ವಿನಹ: ಉಳಿದವರ ಠೇವಣಿಯನ್ನು ಏಲಂ ಮುಗಿದಾಕ್ಷಣ ಮರು ಪಾವತಿಸಲಾಗುವುದು.

6) ಅಂತಿಮ ಬಿಡ್ಡುದಾರನು ಐಟಂವಾರು ಏಲಂ ಅವರ ಹೆಸರಿಗೆ ಖಾಯಂಗೊಂಡ ಕೂಡಲೇ ನಿಗದಿ ಪಡಿಸಿದ ಬಾಡಿಗೆ (ಮಾಸಿಕ ಲೈಸನ್ಸ್) ಮೊತ್ತದ 6 ತಿಂಗಳ ಹಣವನ್ನು ಮುಂಗಡವಾಗಿ ಪಾವತಿಸಿ ರಶೀಧಿ ಪಡೆಯ ತಕ್ಕದ್ದು. ಈ ರೀತಿ ಪಾವತಿಸುವ ಹಣಕ್ಕೆ ಬಡ್ಡಿಯನ್ನು ಕೊಡಲಾಗುವುದಿಲ್ಲ. ಈ ರೀತಿ ಪಾವತಿಸಿದ ಮುಂಗಡ ಬಾಡಿಗೆಯನ್ನು ನಿಗಧಿ ಪಡಿಸಿದ ಲೀಸ್ ಅವಧಿಯ ಮುಗಿಯುವ 6 ತಿಂಗಳ ಮುಂಚಿ ಹೊಂದಾಣಿಕೆ ಮಾಡಿಕೊಳ್ಳಲಾಗುವುದು.

7) ನಿಗದಿ ಪಡಿಸಿದ ಬಾಡಿಗೆಯನ್ನು ಪ್ರತಿ ಮೂರು ವರ್ಷಗಳಿಗೊಮ್ಮೆ ಶೇಕಡಾ 10 ರಂತೆ ಹೆಚ್ಚಿಗೆ ಮಾಡಿ ಮರು ನಿಗದಿಪಡಿಸಲಾಗುವುದು.

8) ಅಂತಿಮ ಬಿಡ್ಡುದಾರನ ಐಟಂವಾರು ಏಲಂ ಅವರ ಹೆಸರಿಗೆ ಕೌನ್ಸಿಲ ಸಭೆಯಲ್ಲಿ ಖಾಯಂ ಆದ ಬಳಿಕ ಜಿಲ್ಲಾಧಿಕಾರಿಯವರ ಮಂಜೂರಾತಿಗೆ ಪ್ರಸ್ತಾವನೆ ಸಲ್ಲಿಸಲಾಗುವುದು. ಸದ್ರಿ ಪ್ರಸ್ತಾವನೆಗೆ ಮಂಜೂರಾತಿ ದೊರಕಿದ ಬಳಿಕ ಏಲಂನಲ್ಲಿ ಬಿಡ್ ಮೂಲಕ ನಿಗಧಿ ಪಡಿಸಿದ ಮರು ಪಾವತಿಯಿಲ್ಲದ ಪ್ರೀಮಿಯಂ ಹಣವನ್ನು ಪುರಸಭೆಗೆ ಪಾವತಿಸಲು ತಿಳುವಳಿಕೆ ಪತ್ರ ನೀಡಿದ ಬಳಿಕ ನಿಗಧಿ ಪಡಿಸಿದ ಅವಧಿಯೊಳಗೆ ಹಣ ಪಾವತಿಸಿ ರಶೀಧಿ ಪಡೆಯ ತಕ್ಕದ್ದು. ಈ ರೀತಿ ಪಾವತಿಸುವ ಹಣವನ್ನು ಹಿಂದಿರುಗಿಸಲಾಗುವುದಿಲ್ಲ.

9) ಅಂತಿಮ ಬಿಡ್ಡುದಾರನು ತಿಳುವಳಿಕೆ ಪತ್ರ ಪಡೆದ ನಂತರ ಮರು ಪಾವತಿ ಇಲ್ಲದ ಪ್ರೀಮಿಯಂ ಹಣವನ್ನು ಪುರಸಭೆಗೆ ಪಾವತಿಸಲು ವಿಫಲವಾದಲ್ಲಿ (ತಪ್ಪಿದಲ್ಲಿ) ಆತನ 6 ತಿಂಗಳ ಮುಂಗಡ ಮಾಸಿಕ ಲೈಸನ್ಸ್ ಫೀ (ಬಾಡಿಗೆ)ಯನ್ನು ಮುಟ್ಟುಗೋಲು ಹಾಕಿಕೊಂಡು ಏಲಂನಲ್ಲಿ ನಿಂತ ಬಾಬನ್ನು (ಐಟಂ) ಮರು ಏಲಂಗೆ ಗುರಿ ಪಡಿಸಲಾಗುವುದು. ಹೀಗೆ ಗುರಿ ಪಡಿಸಿದ ಮರು ಏಲಂನಲ್ಲಿ ಪುರಸಭೆಗೆ ಲಾಭ ಬಂದಲ್ಲಿ ಬಿಡ್ಡುದಾರನಿಗೆ ಲಾಭಾಂಶ ಕೇಳುವ ಹಕ್ಕು ಇರುವುದಿಲ್ಲ. ನಷ್ಟ ಉಂಟಾದಲ್ಲಿ ನಷ್ಟದ ಮೊತ್ತವನ್ನು ಮೊದಲ ಬಿಡ್ಡುದಾರರಿಂದ ಕಂದಾಯ ಬಾಕಿಯಂತೆ ಅಥವಾ ಕಾನೂನಿನ ಅನ್ವಯ ವಸೂಲಿ ಮಾಡಲಾಗುವುದು.

10) ಏಲಂ ಮಂಜೂರಾತಿದಾರರು ಅತ್ಯುಚ್ಚ ಬಿಡ್ಡುದಾರನಿಗೆ ಏಲಂ ಮಂಜೂರಾದ ವಿಚಾರವನ್ನು ತಿಳಿಸಿದ ನಂತರ ಆತನು ಗುತ್ತಿಗೆದಾರನಾಗಿ ಪರಿವರ್ತನೆಯಾಗುವನು. ಗುತ್ತಿಗೆದಾರನು ಏಲಂ ಮಂಜೂರಾದ ಆದೇಶ ಪಡೆದ ಏಳು (7) ದಿನಗಳೊಳಗಾಗಿ ತನ್ನ ಸ್ವಂತ ಖರ್ಚಿನಲ್ಲಿ ಮುದ್ರಾಂಕವಾದ ದಸ್ತಿ ಕಾಗದದಲ್ಲಿ (ಸ್ಟ್ಯಾಂಪ ಪೇಪರ) ಏಲಂ ಷರತ್ತುಗಳನ್ನು ಪಾಲಿಸಿಕೊಂಡು ಹೋಗುವ ಬಗ್ಗೆ ಎರಡು ಜನ ಸಾಕ್ಷಿದಾರರ ಸಮಕ್ಷಮ ಕರಾರು ಪತ್ರವನ್ನು ಬರೆದುಕೊಡತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಗುತ್ತಿಗೆಯನ್ನು ವಜಾ ಮಾಡಿ ಏಲಂನಲ್ಲಿ ಪಡೆದ ಮೊಬಲಗನ್ನು ಮುಟ್ಟುಗೋಲು ಹಾಕಿಕೊಂಡು ಸದ್ರಿ ಕೋಣೆಯನ್ನು ಪುರಸಭೆಯ ಸ್ವಾಧೀನಕ್ಕೆ ಪಡೆದು ಮರು ಏಲಂಗೆ ಗುರಿ ಪಡಿಸುವ ಅಧಿಕಾರವನ್ನು ಪುರಸಭೆ ಹೊಂದಿರುತ್ತದೆ.

11) ನಿಗದಿ ಪಡಿಸಿದ ತಿಂಗಳ ಮಾಸಿಕ ಲೈಸನ್ಸ್ ಫೀ (ಬಾಡಿಗೆ)ಯನ್ನು ಮುಂದಿನ ತಿಂಗಳ ಹತ್ತನೇ ತಾರೀಖಿನ ಒಳಗಾಗಿ ಪುರಸಭೆಗೆ ಪಾವತಿಸಿ ರಶೀದಿ ಪಡೆಯತಕ್ಕದ್ದು. ತಡವಾಗಿ ಪಾವತಿಸುವ ಹಣಕ್ಕೆ ಶೇಕಡಾ 10ರ ದರದಲ್ಲಿ ತಡ ಫೀ ವಿಧಿಸಿ (ಸೇರಿಸಿ) ಕಂತನ್ನು ವಸೂಲಿ ಮಾಡಲಾಗುವುದು. ಒಂದು ವೇಳೆ 10ನೇ ತಾರೀಖು ಸರಕಾರಿ ರಜಾ ದಿನವಾದಲ್ಲಿ ಹಿಂದಿನ ದಿನವೇ ಮಾಸಿಕ ಲೈಸನ್ಸ ಫೀ ಪಾವತಿಸತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಗುತ್ತಿಗೆಯನ್ನು ರದ್ದು ಪಡಿಸಿ ಮರು ಏಲಂ ನಡೆಸಲು ಪುರಸಭೆ ಅಧಿಕಾರ ಹೊಂದಿರುತ್ತದೆ.

12) ಮಳಿಗೆಗಳನ್ನು ಪಡೆದುಕೊಂಡವರು ಅವರು ನಡೆಸುವ ಉದ್ಯಮಗಳ ಬಗ್ಗೆ ಪುರಸಭೆಯಿಂದ ಪ್ರತ್ಯೇಕ ಲೈಸನ್ಸ್ ಪಡೆಯತಕ್ಕದ್ದು. ಒಂದೇ ರೀತಿಯ ಉದ್ಯಮಗಳಿಗೆ ಅವಕಾಶ ಇರುವುದಿಲ್ಲ. ಯಾವುದೇ ಅಂಗಡಿ ಕೋಣೆಗಳಲ್ಲಿ ಮದ್ಯ ಮಾರಾಟ ಮತ್ತು ಸ್ಫೋಟಕ ವಸ್ತುಗಳ ಮಾರಾಟ ಹಾಗೂ ಅದಕ್ಕೆ ಸಂಬಂಧಿಸಿದ ಉದ್ಯಮ ನಡೆಸಲು ಅವಕಾಶವಿರುವುದಿಲ್ಲ. ಅಂತಹ ವ್ಯಾಪಾರ ನಡೆಸುವ ವಿಚಾರ ತಿಳಿದು ಬಂದಲ್ಲಿ ಸದ್ರಿ ಲೈಸನ್ಸದಾರರಿಗೆ ಮಾಸಿಕ ಲೈಸನ್ಸ್ ಫೀ ಆಧಾರದಲ್ಲಿ ವಹಿಸಿಕೊಟ್ಟ ಅಂಗಡಿ ಕೋಣೆಯ ಲೀಸನ್ನು ರದ್ದು ಪಡಿಸಿ ಕೋಣೆಯನ್ನು ಪುರಸಭೆಯ ಸ್ವಾಧೀನಕ್ಕೆ ತೆಗೆದುಕೊಳ್ಳಲಾಗುವುದು. ಇಂತಹ ಸಂದರ್ಭದಲ್ಲಿ ಉಂಟಾಗುವ ಕಷ್ಟ, ನಷ್ಟಗಳಿಗೆ ಮಾಸಿಕ ಲೈಸನ್ಸ್ ಫೀ ದಾರರೇ ಹೊಣೆಗಾರರಾಗಿರುತ್ತಾರೆಯೇ ವಿನಹ: ಪುರಸಭೆಯು ಜವಾಬ್ದಾರರಲ್ಲ.

13) ಗುತ್ತಿಗೆದಾರನು ಒಳಗುತ್ತಿಗೆಯನ್ನು ಕೊಡಲು ಅವಕಾಶವಿರುವುದಿಲ್ಲ. ಒಳಗುತ್ತಿಗೆಕೊಟ್ಟದ್ದು ತಿಳಿದು ಬಂದಲ್ಲಿ ಗುತ್ತಿಗೆಯನ್ನು ರದ್ದು ಪಡಿಸಿ ಮರು ಏಲಂ ಕ್ರಮ ನಡೆಸಲು ಪುರಸಭೆಗೆ ಅಧಿಕಾರ ಇರುತ್ತದೆ. ಗುತ್ತಿಗೆದಾರನು ಮಾಸಿಕ ಲೈಸನ್ಸ್ ಫೀ ಗೆ ಪಡೆದು ಹೊಂದಿರುವ ಕೋಣೆಯನ್ನು ವಿರೂಪಗೊಳಿಸುವುದಾಗಲೀ ಜಖಂ ಗೊಳಿಸುವುದಾಗಲೀ, ತನ್ನ ಇಚ್ಛೆಯಂತೆ ದುರಸ್ತಿ ಪಡಿಸುವುದಾಗಲೀ ಅಧಿಕಾರವಿರುವುದಿಲ್ಲ. ಗುತ್ತಿಗೆಯ ಅವಧಿಯಲ್ಲಿ ಕೋಣೆಯನ್ನು ದುರಸ್ತಿ ಮಾಡಿಸಿಕೊಡಬೇಕೆಂದು ನಿಬಂಧನೆ ಹಾಕುವಂತಿಲ್ಲ. ಒಂದು ವೇಳೆ ಗುತ್ತಿಗೆ ಅವಧಿಯಲ್ಲಿ ಕಟ್ಟಡದ ದುರಸ್ತಿ ಅಗತ್ಯವಾಗಿ ಆಗಬೇಕಾದಲ್ಲಿ ಪುರಸಭೆಯಿಂದ ಮುಂಚಿತವಾಗಿ ಅನುಮತಿಯನ್ನು ಪಡೆದು ತನ್ನ ಸ್ವಂತ ಖರ್ಚಿನಲ್ಲಿ ದುರಸ್ತಿ ಮಾಡಿಕೊಳ್ಳ ತಕ್ಕದ್ದು.

14) ಗುತ್ತಿಗೆದಾರನಿಗೆ ಮಾಸಿಕ ಲೈಸನ್ಸ್ ಫೀ ಗೆ ವಹಿಸಿಕೊಟ್ಟ ಅವಧಿಯೊಳಗೆ ಏಲಂನಲ್ಲಿ ಪಡೆದ ಕೋಣೆಯನ್ನು ನಡೆಸಲು ಸಾಧ್ಯವಾಗದೇ ಪುರಸಭೆಗೆ ಬಿಟ್ಟು ಕೊಟ್ಟಲ್ಲಿ ಯಾವುದೇ ರೀತಿಯ ಪರಿಹಾರ ಅಥವಾ ಪುರಸಭೆಗೆ ಪಾವತಿಸಿರುವ ಮರು ಪಾವತಿ ಇಲ್ಲದ ಪ್ರೀಮಿಯಂ ಅಥವಾ ಯಾವುದೇ ಮೊತ್ತವನ್ನು ವಾಪಾಸು ಕೇಳುವ ಹಕ್ಕು ಇರುವುದಿಲ್ಲ. ಇಂತಹ ಸಂದರ್ಭದಲ್ಲಿ ಉಂಟಾಗುವ ಕಷ್ಟ ನಷ್ಟಗಳಿಗೆ ಗುತ್ತಿಗೆದಾರರೇ ಹೊಣೆಗಾರರಾಗಿರುತ್ತಾರೆಯೇ ವಿನಹ: ಪುರಸಭೆಯು ಜವಾಬ್ದಾರರಲ್ಲ.

15) ಪುರಸಭಾ ವ್ಯಾಪ್ತಿಯಲ್ಲಿ ಪ್ರಕೃತಿ ವಿಕೋಪ, ಸಾಂಕ್ರಾಮಿಕ ರೋಗಗಳು, ರಸ್ತೆ ನಿರ್ಮಾಣ ಇನ್ನಿತರ ಅಗತ್ಯ ಕಾರ್ಯದ ಪ್ರಯುಕ್ತ ನಗರದೊಳಗೆ ವಾಹನ ಸಂಚಾರ ನಿರ್ಬಂಧಿಸುವ ಸಂದರ್ಭದಲ್ಲಿ ಅಥವಾ ಯಾವುದೇ ಕಾರಣದಿಂದ ಆಗಬಹುದಾದ ಆರ್ಥಿಕ ಕಷ್ಟ ನಷ್ಟಗಳಿಗೆ ಗುತ್ತಿಗೆದಾರರೇ [illegible] ಹೊಣೆಗಾರರು ಆಗಿರುತ್ತಾರೆ. ಯಾವುದೇ ಕಾರಣಕ್ಕೆ ಪುರಸಭೆಯು ಜವಾಬ್ದಾರರಲ್ಲ. ಈ ಸಂದರ್ಭದಲ್ಲಿ [illegible] ಸಂಭವಿಸುವ ಕಷ್ಟ ನಷ್ಟಗಳಿಗೆ ಪುರಸಭೆಯಿಂದ ಪರಿಹಾರ ಕೇಳುವ ಅಥವಾ ಬಾಡಿಗೆ ಮನ್ನಾ ಮಾಡುವಂತೆ ಕೇಳುವ ಹಕ್ಕು ಇರುವುದಿಲ್ಲ. ಈ ಬಗ್ಗೆ ಯಾವುದೇ ರೀತಿಯ ಪರಿಹಾರ ನೀಡಲು ಅಥವಾ ಬಾಡಿಗೆ ಮನ್ನಾ ಮಾಡಲು ಕಾನೂನಿನಲ್ಲಿ ಅವಕಾಶವಿರುವುದಿಲ್ಲ.

16) ಗುತ್ತಿಗೆದಾರರು ಪುರಸಭೆಯಿಂದ ಕಾಲಕಾಲಕ್ಕೆ ನೀಡುವ ಆದೇಶವನ್ನು ಪಾಲಿಸಲು ಬದ್ಧರಾಗಿರ ತಕ್ಕದ್ದು. ಇದರಿಂದ ಆಗುವ ಲಾಭ ಅಥವಾ ನಷ್ಟಗಳಿಗೆ ಪುರಸಭೆಯನ್ನು ಹೊಣೆಗಾರರು ಅಥವಾ ಜವಾಬ್ದಾರಿಗೆ ಗುರಿ ಪಡಿಸುವ ಅಧಿಕಾರ ಗುತ್ತಿಗೆದಾರರಿಗೆ ಇರುವುದಿಲ್ಲ.

17) ಯಾವುದೇ ಷರತ್ತುಗಳನ್ನು ಗುತ್ತಿಗೆದಾರನು ಪಾಲಿಸದಿದ್ದಲ್ಲಿ ಅಥವಾ ಮುಖ್ಯಾಧಿಕಾರಿಯವರ ದೃಷ್ಟಿಯಿಂದ ತಪ್ಪು ಎಂದು ಕಂಡು ಬಂದಲ್ಲಿ ಗುತ್ತಿಗೆದಾರಿಗೆಯನ್ನು ರದ್ದು ಪಡಿಸುವ ಅಧಿಕಾರ ಪುರಸಭೆಗೆ ಕಾಯ್ದಿರಿಸಿದೆ.

18) ಟೆಂಡರ್ ಕವರ್ ಎಲ್ಲಾ ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಾಗೂ ಕಾರಣ ನೀಡದೇ ಮುಂದೂಡುವ ಅಧಿಕಾರವನ್ನು ಪುರಸಭೆಗೆ ಕಾಯ್ದಿರಿಸಿ ಕೊಂಡಿದೆ.

19) ಟೆಂಡರ್ ಕವರ್ ಎಲ್ಲಾ ಅನುಮೋದನೆಯು ಕೌನ್ಸಿಲ್ ಅಧಿಕಾರಕ್ಕೆ ಒಳಪಟ್ಟಿದೆ.

ಅಧ್ಯಕ್ಷರು,
ಪುರಸಭೆ, ಕುಂದಾಪುರ.

ಮುಖ್ಯಾಧಿಕಾರಿ,
ಪುರಸಭೆ, ಕುಂದಾಪುರ.